**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ, ಧಾರವಾಡ**

ಸಿಸಿ ನಂಃ **3596/2023**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ಧ-

ಆರೋಪಿತರುಃ-

1) ಅಬ್ದುಲ್ ಸಮದ ಮಹ್ಮದಸಾಬ ಸವಣೂರ
ವಯಾಃ 18 ವರ್ಷ, ಉಃ ವಿದ್ಯಾರ್ಥಿ
ಸಾಃ ಪಠಾಣ ಗಲ್ಲಿ ನವಲೂರ ಧಾರವಾಡ

2) ಮಹ್ಮದಸಮೀರ ಮಹಬೂಬಅಲಿ ಸವಣೂರ
ವಯಾಃ 19 ವರ್ಷ, ಉಃ ವಿದ್ಯಾರ್ಥಿ
ಸಾಃ ಪಠಾಣ ಗಲ್ಲಿ ನವಲೂರ ಧಾರವಾಡ

3) ಇಜಾಜ್ ಅಹ್ಮದ ಮಹ್ಮದಸಾಬ ಸವಣೂರ
ವಯಾಃ 20 ವರ್ಷ, ಉಃ ವಿದ್ಯಾರ್ಥಿ
ಸಾಃ ಪಠಾಣ ಗಲ್ಲಿ ನವಲೂರ ಧಾರವಾಡ

4) ಮೆಹಾಫುಜ್ ಉರ್ಫ ಮೆಹಬೂಬಅಲಿ ಸವಣೂರ
ವಯಾಃ 57 ವರ್ಷ, ಉಃ ಕಾರ ಚಾಲಕ
ಸಾಃ ಪಠಾಣ ಗಲ್ಲಿ ನವಲೂರ ಧಾರವಾಡ

## ದೋಷಾರೋಪಣೆ

ಶ್ರೀ ಅಲ್ಲಪ್ಪ ಮಹಾದೇವಪ್ಪ ಬಡಿಗೇರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ವೋಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳೆಂದರೆಃ-

ಮೊದಲನೇಯದಾಗಿ, ದಿಃ 19.03.2023 ರಂದು ರಾತ್ರಿ 9.15 ಗಂಟೆ ಸುಮಾರಿಗೆ ಪಿರ್ಯಾದಿದಾರರು ನವಲೂರ ಪಠಾಣ ಗಲ್ಲಿ ಜುಮ್ಮಾ ಮಸೀದಿಯಲ್ಲಿ ನಮಾಜ ಮಗಿಸಿಕೊಂಡು ಹೊರಗೆ ಕಾಲಿಗೆ ಚಪ್ಪಲಿ ಧರಿಸುವಾಗ 1 ನೇ ಆರೋಪಿತನು ಪಿರ್ಯಾದಿಗೆ ಮಸೀದಿ ಮೆಂಬರಪೀಫ್ ಹೆಸರು ತೆಗೆಯಲು ಏಕೆ ಅರ್ಜಿ ಕೊಟ್ಟಿರುವೆ ಅಂತಾ ಪಿರ್ಯಾದಿ ಜೊತೆ ತಂಟೆ ಮಾಡುವಾಗ 2, 3, ಮತ್ತು 4 ನೇ ಆರೋಪಿತನಾರಾದ ನೀವು ಫಿರ್ಯಾದಿದಾರನಿಗೆ ಕೈಯಿಂದ ಹೊಡೆದು ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ **323** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ಎರಡನೇಯದಾಗಿ,ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ, 2 ಮತ್ತು 3 ನೇ ಆರೋಪಿತರು ಅಲ್ಲಿಯೇ ಬಿದ್ದಿದ್ದ

ಕಟ್ಟಿಗೆಗಳನ್ನು ತೆಗೆದುಕೊಂಡು ಪಿರ್ಯಾದಿಯ ತಲೆಗೆ ಹೊಡೆದು ನೋವನ್ನುಂಟುಮಾಡಿ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ **324** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ಮೂರನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಸಮಾನ ಮನಸ್ಸಿನಿಂದ, ಫಿರ್ಯಾದಿಯನ್ನು ಮುಂದಕ್ಕೆ ಹೋಗದಂತೆ ತಡೆದು ನಿಲ್ಲಿಸಿ ಏಕಾ ಏಕೀ ಅವನ ಮೇಲೆ ಏರಿ, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ **341** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ?

ನಾಲ್ಕನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ 1 ನೇ ಆರೋಪಿತನಾದ ನೀನು ಫಿರ್ಯಾದಿಗೆ ಭೋಸಡಿಕೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಪಡಿಸಿ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ **504** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಪಿರ್ಯಾದಿದಾರನಿಗೆ ಮನೆಗೆ ಹೋಗಿ ಮನೆಯಿಂದ ಹೊರಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿ ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ **506** ಸಹ ಕಲಂ **34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿಯಾದ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು.)

ಧಾರವಾಡ
ದಿನಾಂಕಃ

(ಅಲ್ಲಪ್ಪ ಮಹಾದೇವಪ್ಪ ಬಡಿಗೇರ)
3 ನೇ ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಧಾರವಾಡ.

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾ.ಯಾಲಯ, ಧಾರವಾಡ.

ಸಿಸಿ ನಂಃ **3596/2023**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ ಪೋಲಿಸ್ ಠಾಣೆ)

-ವಿರುದ್ಧ-

ಆರೋಪಿತಃ- 1|) ಅಬ್ದುಲ್ ಸಮದ ಮಹ್ಮದಸಾಬ ಸವಣೂರ

ಃಆಪಾದನೆಃ

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?

ಉತ್ತರಃ

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ **3** ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ**.,** ಧಾರವಾಡ**.**

ಆರೋಪಿತನ ಸಹಿ

ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾ.ಯಾಲಯ, ಧಾರವಾಡ.

ಸಿಸಿ ನಂಃ **3596/2023**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ ಪೋಲಿಸ್ ಠಾಣೆ)

-ವಿರುದ್ಧ-

ಆರೋಪಿತಃ- 2) ಮಹ್ಮದಸಮೀರ ಮಹಬೂಬಅಲಿ ಸವಣೂರ

ಃಆಪಾದನೆಃ

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?

ಉತ್ತರಃ

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ **17-08-2024** **3** ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ**.,** ಧಾರವಾಡ.

ಆರೋಪಿತನ ಸಹಿ

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಧಾರವಾಡ.**

ಸಿಸಿ ನಂ: **3596/2023**

ಫಿರ್ಯಾದಿ:- ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ ಪೋಲಿಸ್ ಠಾಣೆ)

-ವಿರುದ್ಧ-

ಆರೋಪಿತ:- 3) ಇಜಾಜ್ ಅಹ್ಮದ ಮಹ್ಮದಸಾಬ ಸವಣೂರ

ಃಆಪಾದನೆಃ

ಪ್ರಶ್ನೆ: ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರ:

ಪ್ರಶ್ನೆ: ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?

ಉತ್ತರ:

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕ: **17-08-2024** **3** ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ**.,** ಧಾರವಾಡ**.**

ಆರೋಪಿತನ ಸಹಿ

**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾ.ಯಾಲಯ, ಧಾರವಾಡ.

ಸಿಸಿ ನಂಃ **3596/2023**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ ಪೋಲಿಸ್ ಠಾಣೆ)

-ವಿರುದ್ಧ-

ಆರೋಪಿತಃ- 4) ಮೆಹಾಫುಜ್ ಉರ್ಪ ಮೆಹಬೂಬಅಲಿ ಸವಣೂರ

ಃಆಪಾದನೆಃ

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?

ಉತ್ತರಃ

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ಯಾಲಯದಲ್ಲಿ ದಾಖಲಿಸಿಕೊಳ್ಳಲಾಯಿತು)

ಧಾರವಾಡ
ದಿನಾಂಕಃ **17-08-2024** **3** ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ., ಧಾರವಾಡ.

ಆರೋಪಿತನ ಸಹಿ